

# ಮಮತೆ–ಸ್ವಾರ್ಥದ ಮುಖಾಮುಖಿ

**ಜೀವಂತ ಶವದಂತಿರುವ ಹೆಣ್ಣಿನ ದೇಹಕ್ಕೆ ಮುಕ್ತಿ ಕೊಡಲು ಹೊರಟಿರುವ ಗಂಡ, ‘ಅಮ್ಮ ಸಾಯಲಿ’ ಎಂದು ಮನಸೊಳಗೇ ಬಯಸುತ್ತ ಹೊರಗಿನಿಂದ ಒಳ್ಳೆಯತನ ನಟಿಸುವ ಇಬ್ಬರು ಮಕ್ಕಳು... ಹೀಗೆ ಮೂರು ಬಿಂದುಗಳಲ್ಲಿ ಬೆಳೆಯುತ್ತ ಹೋಗುವ ಈ ಕಿರುಚಿತ್ರ ಮನುಷ್ಯನ ಸ್ವಾರ್ಥದ ಬದುಕಿನ ವಿವಿಧ ಮಗ್ಗುಲುಗಳನ್ನು ದರ್ಶಿಸುತ್ತದೆ.**

■ ಗೌರಿ

ಸಾಹಿತ್ಯ, ಸಂಗೀತ, ಸಿನಿಮಾ, ನಾಟಕ ಎಲ್ಲ ಕಲಾಪ್ರಕಾರಗಳಲ್ಲಿಯೂ ತ್ಯಾಗ, ನಿಸ್ವಾರ್ಥ, ಮಮತೆಯ ಅಮ್ಮನ ಒಂದು ಮಾದರಿ ಇದೆ. ಈ ಮಾದರಿಯನ್ನು ಮುನ್ನೆಲೆಗೆ ತೆಗೆದುಕೊಂಡು ಬರದೇ ಅದರ ನೆರಳಿನಲ್ಲಿ ಕುಟುಂಬದ ಇತರರ ಸ್ವಾರ್ಥ, ಸಣ್ಣತನ, ಅಸಹಾಯಕತೆಗಳನ್ನೇ ಕೇಂದ್ರವಾಗಿ ತೋರಿಸುವ ಕಿರುಚಿತ್ರ ‘ಅಧೀನ್’.

ವಿಸ್ತರಿಸಿಕೊಳ್ಳುತ್ತ ಹೋಗುವ ಬದುಕು ಯಾಕೆ ತನ್ನ ಮೂಲವನ್ನು ಮರೆಯಲು ಯತ್ನಿಸುತ್ತದೆ. ಬೆಳೆಯುತ್ತ ಹೋದ ಹಾಗೆ ಯಾಕೆ ಮಕ್ಕಳಿಗೆ ಅಪ್ಪ–ಅಮ್ಮ ಭಾರವಾಗಿ ಕಾಣಲು ಶುರುವಾಗುತ್ತಾರೆ. ಅಸಹಾಯಕರಾಗಿರುವ ಜನ್ಮದಾತರ ಕೈ ಹಿಡಿದುಕೊಳ್ಳಲು ಹಿಂಜರಿಯುವಂತೆ ಮಾಡುವ ಕಾಣದ ತಡೆ ಯಾವುದು? ತಾವು ಇಂದು ಬದುಕುತ್ತಿರುವ ಸ್ವಯಂಕೇಂದ್ರಿತ ಬದುಕು, ಹಣದ ಹಿಂದೆ ಬಿದ್ದ ಓಟ, ಗಳಿಸಿಕೊಂಡ ಸಂಪತ್ತು ಯಾವುದೂ ನಮ್ಮನ್ನು ವೃದ್ಧಾಪ್ಯಕ್ಕೆ ಅಡಿಯಿಡುವುದನ್ನು ತಪ್ಪಿಸಲಾರದು ಎಂಬ ಪ್ರಜ್ಞೆ ಯಾಕೆ ಬರುವುದಿಲ್ಲ? ದೈನ್ಯದಿಂದ ನಮ್ಮೆಡೆಗೆ ನೋಡುತ್ತಿರುವ ತಂದೆ ತಾಯಿಯ ಸ್ಥಾನದಲ್ಲಿ ನಾಳೆ ನಾನೂ ನಿಂತುಕೊಳ್ಳುವುದಿದೆ ಎಂಬ ಎಚ್ಚರ ಯಾಕೆ ನಮ್ಮ ಎದೆಯಲ್ಲಿ ನಡುಕ ಹುಟ್ಟಿಸುವುದಿಲ್ಲ? ಅಥವಾ ಈ ಎಲ್ಲದಕ್ಕೂ ನಮಗೆ ನೇರವಾಗಿ ಕಾಣುವುದನ್ನು ಬಿಟ್ಟೂ ಬೇರೆ ಆಯಾಮಗಳಿರಬಹುದೇ? ಒಳಿತು ಕೆಡುಕುಗಳೆಂದು ವಿಂಗಡಿಸಲಾಗದ ಸಂಗತಿಗಳಲ್ಲಿಯೇ ನಮ್ಮ ಬದುಕು ಸಂಕೀರ್ಣವಾಗಿ ಹೆಣೆದುಕೊಂಡಿರುತ್ತದಲ್ಲವೇ?

ಈ ಎಲ್ಲ ಪ್ರಶ್ನೆಗಳನ್ನು ‘ಅಧೀನ್’ ಕಿರುಚಿತ್ರ ನಮ್ಮಲ್ಲಿ ಕೊಳದಲ್ಲಿ ಬಿದ್ದ ಕಲ್ಲು ಏಳಿಸುವ ತರಂಗಗಳಂತೆ ಪ್ರಶ್ನೆಗಳನ್ನು ಎಬ್ಬಿಸುತ್ತದೆ.

ವರ್ಷಗಳ ನಂತರ, ಅಪ್ಪನಿಗೆ ಆರೋಗ್ಯ ಕೆಟ್ಟಿದೆ ಎಂಬ ಸುದ್ದಿ ಕೇಳಿ ಮಗ ಮತ್ತು ಮಗಳು ಗಡಿಬಿಡಿಯಲ್ಲಿ ಓಡೋಡಿ ಬಂದಿದ್ದಾರೆ. ಅದೊಂದು ಜೋಪಡಿಯನ್ನು ಹೋಲುವಂಥ ಮನೆ. ಬಡತನ ಎದ್ದು ಕಾಣುತ್ತದೆ. ಅಲ್ಲಿ ವೃದ್ಧನೊಬ್ಬ ತನ್ನ ಕಾಯಿಲೆಪೀಡಿತ ಹೆಂಡತಿಯನ್ನು ನೋಡಿಕೊಂಡು ಇದ್ದಾನೆ. ಮಕ್ಕಳು ಬಂದು ನೋಡಿದರೆ ಅಪ್ಪ ಆರಾಮಾಗೇ ಇದ್ದಾನೆ. ಕೇಳಿದರೆ, ‘ನಿಮ್ಮನ್ನು ಕರೆಸಲು ಮಾಡಿದ ಉಪಾಯ’ ಎನ್ನುತ್ತಾನೆ.



**ಹೆಸರು:** ಅಧೀನ್
**ನಿರ್ದೇಶನ:** ಯಶ್ ವರ್ಮ
**ತಾರಾಗಣ:** ಸಂಜಯ್ ಮಿಶ್ರಾ, ಅನುಪ್ರಿಯಾ ಗೋಯೆಂಕಾ, ನೀರಜ್ ಪ್ರದೀಪ್ ಪುರೋಹಿತ್
**ಛಾಯಾಗ್ರಹಣ:** ಸುಜಯ್ ಮಿಶ್ರಾ
**ಸಂಕಲನ:** ಅಜಯ್ ಗುಪ್ತಾ

ಮಗ ಯಾವುದೋ ಕಾನೂನುಬಾಹಿರ ವ್ಯವಹಾರಗಳಲ್ಲಿ ತೊಡಗಿಕೊಂಡು ಹಣ ಸಂಪಾದಿಸುತ್ತಿದ್ದಾನೆ. ಶಿಕ್ಷಕಿಯಾಗಿರುವ ಲೆಸ್ಬಿಯನ್ ಮಗಳು ತನ್ನ ಸಂಗಾತಿಯೊಟ್ಟಿಗೆ ಬದುಕು ಸಾಗಿಸುತ್ತಿದ್ದಾಳೆ. ತಮ್ಮದೇ ದಂಧುಗದಲ್ಲಿ ಮುಳುಗಿದ ಮಕ್ಕಳಿಗೆ ಅಪ್ಪ ಅಮ್ಮ ದೀಪಾವಳಿ, ಯುಗಾದಿಗೆ ಅರ್ಧಗಂಟೆ ಭೇಟಿ ಕೊಟ್ಟು ಹೋಗುವ ನಿಲ್ದಾಣ ಮಾತ್ರ. ಮನೆಗೆ ಬಂದ ಮೂರೇ ನಿಮಿಷಕ್ಕೆ ಒಡಹುಟ್ಟಿದವರ ಮಧ್ಯೆ ಕೆಲಸ, ಬದುಕು, ಜವಾಬ್ದಾರಿ ಯಾವ್ಯಾವುದೋ ವಿಷಯಗಳ ನಡುವೆ ಜಗಳ ನಡೆಯುತ್ತದೆ. ವರ್ಷಗಳ ನಂತರ ತಂದೆಯ ಎದುರು ಕೂತಿದ್ದರೂ ಅವನ ಆರೋಗ್ಯ, ಮನೆಯ ಪರಿಸ್ಥಿತಿಗಳ ಬಗ್ಗೆ ವಿಚಾರಿಸುವ ವ್ಯವಧಾನ ಅವರಿಗಿಲ್ಲ. ಕೋಣೆಯೊಳಗೆ ಜೀವಂತ ಶವವಾಗಿ ಮಲಗಿರುವ ಅಮ್ಮನ ಬಗ್ಗೆ ಕಾಳಜಿಯಿಲ್ಲ.

ಹೀಗೆ ಸಾವನ್ನು ಎದುರು ನೋಡುತ್ತಿರುವ ಅಮ್ಮನ ನೆರಳಿನಲ್ಲಿ ಮಕ್ಕಳ ಸ್ವಾರ್ಥದ ಮುಖಗಳು ಬಿಚ್ಚಿಕೊಳ್ಳುತ್ತ ಹೋಗುತ್ತವೆ. ಸಾವಿನ ಮನೆಯ ಹೊಸ್ತಿಲಲ್ಲಿ ಅಮ್ಮ ‘ಮನೋಜ್’ ಎಂಬ ಯಾವುದೋ ಹೆಸರು ಕನವರಿಸುತ್ತಿದ್ದಾಳೆ. ಆ ಮನೋಜ್ ಯಾರು ಎಂದು ಯಾರಿಗೂ ಗೊತ್ತಿಲ್ಲ.

ತೀರ್ಪು ಕೊಡಲು ಹೋಗದೆ ಕವಲು ದಾರಿಯಲ್ಲಿ ತಂದುನಿಲ್ಲಿಸುವ ಅಂತ್ಯವೂ ಚಿತ್ರದ ಧ್ವನಿಶಕ್ತಿಯನ್ನು ಹೆಚ್ಚಿಸಿದೆ. ಅಪ್ಪ ಹೆಂಡತಿಗೆ ಇನ್ನು ಎಂಟು ತಾಸಿನಲ್ಲಿ ಸಾಯುವ ಔಷಧಿಯನ್ನು ಉಣಿಸಿದ್ದಾನೆ. ‘ಇದರಿಂದ ನಾನು ನಾಲ್ಕು ಜನರಿಗೆ ಬಿಡುಗಡೆ ಕೊಟ್ಟಿದ್ದೇನೆ’ ಎಂದು ಮನೆ ಬಿಟ್ಟು ಹೊರಟವನನ್ನು ಮಕ್ಕಳಿಬ್ಬರೂ ನಿಂದಿಸುತ್ತಾರೆ. ಅಮ್ಮನ ಕೊಂದ ಕೊಲೆಗಾರ ಎಂದು ಜರಿಯುತ್ತಾರೆ. ಆಗ ಅಪ್ಪ ಕಿಸೆಯಿಂದ ಇನ್ನೊಂದು ಔಷಧದ ಶೀಶೆ ತೆಗೆದು ಅವರ ಎದುರಿಗಿಟ್ಟು ‘ಇದನ್ನು ಕೊಟ್ಟರೆ ಅಮ್ಮನಿಗೆ ಏನೂ ಆಗುವುದಿಲ್ಲ. ಬದುಕುಳಿಯುತ್ತಾಳೆ, ಅವಳನ್ನು ಬದುಕಿಸಿಕೊಳ್ಳುವ ಸಾಧ್ಯತೆ ನಿಮ್ಮಿಬ್ಬರಿಗೂ ಇದೆ. ಈಗಾಗಲೇ ಆ ಔಷಧ ಕೊಟ್ಟು ಆರು ತಾಸು ಕಳೆದಿದೆ. ಇನ್ನೆರಡು ತಾಸಿನ ಒಳಗೆ ಈ ಔಷಧಿ ಕೊಟ್ಟು ಬದುಕಿಸಿಕೊಳ್ಳಬಹುದು’ ಎಂದು ಹೇಳಿ ಹೊರಡುತ್ತಾನೆ. ಅದುವರೆಗೆ ಅಪ್ಪನನ್ನು ನಿಂದಿಸುತ್ತಿದ್ದ ಮಕ್ಕಳು ಈಗ ಗಪ್‌ಚುಪ್!

ನಾವೆಲ್ಲರೂ ಹಾಗೆಯೇ ಅಲ್ಲವೇ? ನಮ್ಮ ಮನಸ್ಸಿನ ಆಳದಲ್ಲಿರುವ ಕೇಡನ್ನು ಬೇರೆಯವರು ಕ್ರಿಯಾರೂಪಕ್ಕೆ ತರಲಿ, ನಾವು ಅದರ ಲಾಭವನ್ನೂ ಪಡೆದುಕೊಳ್ಳಬಹುದು, ಹಾಗೆಯೇ ಪಾಪವನ್ನು ಕೈಗಂಟಿಸಿಕೊಳ್ಳದೆ ಒಳ್ಳೆಯವರೂ ಆಗಿರಬಹುದು ಎಂದು ಹುನ್ನಾರ ನಡೆಸುತ್ತಲೇ ಇರುತ್ತೇವಲ್ಲವೇ?

ಈ ಕಿರುಚಿತ್ರ ವೀಕ್ಷಣೆಗೆ **shorturl.at/ckpJO** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.